


## ಶಾರೂಕ್ ಜತೆಗೆ ಐಶ್

ತಾಯ್ತನದ ಸುಖವುಂಡ ಬಳಿಕ ಈಗ ಐಶ್ವರ್ಯ ರೈ ಮರಳಿ ಸಿನಿಮಾದಲ್ಲಿ ನಟಿಸುವುದು ಖಚಿತವಾಗಿದೆ. ಆಕೆ ಈ ಎರಡನೇ ಇನಿಂಗ್ಸ್‌ನಲ್ಲಿ ನಟಿಸಲಿರುವ ಮೊದಲ ಸಿನಿಮಾ ಯಾವುದು ಎಂಬುದೀಗ ಚರ್ಚೆಯ ವಿಷಯ. ಬಲ್ಲ ಮೂಲಗಳ ಪ್ರಕಾರ, ಫರ್‍ಹಾ ಖಾನ್ ನಿರ್ದೇಶನದ 'ಹ್ಯಾಪಿ ನ್ಯೂ ಈಯರ್' ನಲ್ಲಿ ಐಶ್ವರ್ಯ ಹೀರೋಯಿನ್ ಆಗುವುದು ಖಚಿತ! ಅಂದ ಹಾಗೆ ಈ ಚಿತ್ರದ ನಾಯಕ ಶಾರೂಕ್ ಖಾನ್ ಅಂತೆ.

ಈ ಹಿಂದೆ ಶಾರೂಕ್ ಜತೆಗೆ ಐಶ್ವರ್ಯ ಎರಡು ಸಿನಿಮಾಗಳಲ್ಲಿ ನಟಿಸಿದ್ದಾಳೆ. ಜೋಶ್ ಚಿತ್ರದಲ್ಲಿ ಇಬ್ಬರೂ ಅಣ್ಣ– ತಂಗಿ ಪಾತ್ರದಲ್ಲಿ ನಟಿಸಿದ್ದರೆ, 'ದೇವದಾಸ್' ಚಿತ್ರದಲ್ಲಿ ನಾಯಕ–ನಾಯಕಿ ಆಗಿದ್ದರು. ಈ ಎರಡೂ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಯಶಸ್ವಿ ಎನ್ನಿಸಿದ್ದು ಇಬ್ಬರಿಗೂ ಕೀರ್ತಿ ಮತ್ತು ಪ್ರಶಸ್ತಿಗಳನ್ನು ತಂದುಕೊಟ್ಟದ್ದು ಸುಳ್ಳಲ್ಲ. ಹಲವು ವರ್ಷಗಳ ಬಳಿ ಈಗ ಮತ್ತೆ ಈ ಜೋಡಿ ಒಂದಾದರೆ ಹೇಗಾದೀತು ಎನ್ನುವುದು ಅಭಿಮಾನಿಗಳ ಕುತೂಹಲ.

## ಅಕ್ಷಯ್ ಫ್ಲಾಪ್ ಷೋ!

ತನ್ನ ಹೊಸ ಚಿತ್ರ 'ಒನ್ಸ್ ಅಪಾನ್ ಎ ಟೈಮ್ ಇನ್ ಮುಂಬೈ ಅಗೇನ್' ಪ್ರಚಾರಕ್ಕೆ ಅಕ್ಷಯ ಕುಮಾರ್ ಇನ್ನಿಲ್ಲದ ತಮಾಷೆಗಳನ್ನು ಮಾಡುತ್ತಿದ್ದಾನೆ. ಈ ಸಲದ ಐಪಿಎಲ್ ಕ್ರಿಕೆಟ್‌ನ ಮೊದಲ ಪಂದ್ಯ ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆದಾಗ ಅಕ್ಷಯ್ ಸಹನಟರ ಜತೆ ಸೇರಿ ಸಿನಿಮಾ ಹೆಸರು ಪ್ರಿಂಟ್ ಮಾಡಿದ್ದ ಟೀ ಶರ್ಟ್ ಧರಿಸಿ ಸ್ಟೇಡಿಯಂ ಪ್ರವೇಶಿಸಿದ್ದ. ಕ್ಯಾಮೆರಾಗಳೆಲ್ಲ ತಮ್ಮನ್ನು ಪದೇ ಪದೇ ತೋರಿಸಿದರೆ ಹೊಸ ಚಿತ್ರಕ್ಕೆ ಪುಕ್ಕಟೆ ಪ್ರಚಾರ ಸಿಗುತ್ತದೆ ಎನ್ನುವುದು ಅಕ್ಷಯ್ ಲೆಕ್ಕಾಚಾರವಾಗಿತ್ತು. ಆದರೆ ಐಪಿಎಲ್ ಸಂಘಟಕರು ಅದಕ್ಕೆ ಅವಕಾಶವನ್ನೇ ಕೊಡಲಿಲ್ಲ. 'ಸಿನಿಮಾ ಪ್ರಚಾರಕ್ಕೆ ಅವರ ಜತೆ ಯಾವುದೇ ಒಪ್ಪಂದ ಮಾಡಿಕೊಂಡಿಲ್ಲ. ಹಾಗಾಗಿ ಪದೇ ಪದೇ ತೋರಿಸಬೇಡಿ' ಎಂದು ಅಧಿಕಾರಿಗಳು ತಾಕೀತು ಮಾಡಿದ್ದರಂತೆ. ಹಾಗಾಗಿ ಅಕ್ಷಯ್‌ನನ್ನು ಟಿ.ವಿಯಲ್ಲಿ ಒಮ್ಮೆ 30 ಸೆಕೆಂಡ್ ಕಾಲ ಮಾತ್ರ ತೋರಿಸಿದರಂತೆ! ಇನ್ನೊಂದೆಡೆ ಕೋಲ್ಕತ್ತಾ ತಂಡದ ಒಡೆಯ ಶಾರೂಕ್ ಖಾನ್ ಮಾತ್ರ ಅವತ್ತು ಟಿ.ವಿಯಲ್ಲಿ ಭರ್ಜರಿ ಪ್ರಚಾರ ಪಡೆದ! ■ ಬಿಂದು

